## ಪೂಜೆಗಿಟ್ಟ ಬಂಡಿಗಾಲಿ!

ಈ ಚಿತ್ರದಲ್ಲಿ ಕಾಣುತ್ತಿರುವುದು ಜೋಡಿಬಂಡಿಗಾಲಿಗಳು, ಬನವಾಸಿ ಹತ್ತಿರದ ಹಳ್ಳಿಯಲ್ಲಿ ಪೂಜೆಗೆ ಅಣಿಗೊಳಿಸಿದ್ದಾಗ ತೆಗೆದ ಚಿತ್ರವಿದು. ಹಿಂದೆ ಮಲೆನಾಡು ಪ್ರದೇಶದಲ್ಲಿ ಇವು ಸಾಮಾನ್ಯವಾಗಿ ಕಾಣುತ್ತಿದ್ದವು. ಈಗ ಅವು ತೀರಾ ವಿರಳವಾಗಿವೆ. ಇಂದಿನ ಸಾಕಷ್ಟು ಮಂದಿಗೆ ಈ ಬಂಡಿಗಾಲಿ ಎಂದರೆ ಏನು ಎಂಬುದೇ ತಿಳಿದಿರಲಿಕ್ಕಿಲ್ಲ. ಕೇಳಿ ತಿಳಿದಿದ್ದರೂ ನೋಡಿದವರಂತೂ ಅತಿವಿರಳ. ಮಲೆನಾಡಿನ ಹಳೇ ಕಾಲದಲ್ಲಿ ಒಕ್ಕಲುತನವಿದ್ದವರ ಮೂಲ ಮನೆಗಳಲ್ಲಿ ಹಜಾರದಲ್ಲೋ ದೇವರಮನೆ ಮುಂದೋ ಕಾಣುವ ಬಂಡಿಗಾಲಿಗಳನ್ನು ಜತನದಿಂದ ಕಾಯ್ದಿಟ್ಟು ಹಬ್ಬ ಹರಿದಿನಗಳಲ್ಲಿ ಪೂಜಿಸುವ ಪರಿಪಾಠ ಇಂದಿಗೂ ಮುಂದುವರೆದಿದೆ. ಈ ಜೋಡಿ ಬಂಡಿಗಾಲಿಗಳು ಸುಮಾರು 80–100ವರ್ಷಗಳ ಹಿಂದೆ ಇದ್ದ ಕೋಣದ ಬಂಡಿಗಾಲಿಗಳು ಎನ್ನುವುದು ಹಿರಿಕರ ಮಾತು. ಇವನ್ನು ಇಂದಿಗೂ ಜೋಪಾನವಾಗಿ ಸಂಗ್ರಹಿಸಿಟ್ಟಿದ್ದಾರೆ. ಬಂಡಿಗಾಲಿಗಳಲ್ಲಿ ಚೌಡಿ ವಾಸವಾಗಿರುವಳು ಎಂಬ ಪ್ರತೀತಿಯೂ ಇದೆ. ಹೀಗಾಗಿಯೇ ಇವುಗಳಿಗೂ ವಾರದ ದಿನಗಳಲ್ಲಿ, ಹಬ್ಬಗಳಲ್ಲಿ ದೇವರಿಗೆ ಸಲ್ಲುವ ಎಲ್ಲ ಪೂಜೆಗಳು ಸಲ್ಲುತ್ತಿವೆ.

–ರಾಮಕೃಷ್ಣ ಗೋಖಲೆ, ತಿಳವಳ್ಳಿ






## ಸೋಜಿಗದ ಸೋಗೆ ಪ್ಲಾಸ್ಟಿಕ್ ಮನೆ!

ಯಾವುದೇ ವಸ್ತು ಮನಸೆಳೆಯುವಂತಿದ್ದರೆ ಜನರು ಅದರತ್ತ ಹೆಚ್ಚು ಗಮನ ಹರಿಸುತ್ತಾರೆ. ಸ್ವಚ್ಛತೆ ಕಾಪಾಡಲು ಸರ್ಕಾರವು ಹಲವು ಯೋಜನೆಗಳನ್ನು ಜಾರಿಗೆ ತಂದಿದೆ. ಇದಕ್ಕೆ ಪೂರಕವಾಗಿ ಇಲ್ಲೊಂದು ವಿದ್ಯಾಸಂಸ್ಥೆಯು, ವಿದ್ಯಾರ್ಥಿಗಳಲ್ಲಿ ಸ್ವಚ್ಛತೆಯ ಕುರಿತು ಅರಿವು ಮೂಡಿಸುವ ಸಲುವಾಗಿ ವಿಭಿನ್ನವಾದ ಪ್ರಯತ್ನವೊಂದನ್ನು ಕೈಗೆತ್ತಿಕೊಂಡಿದೆ. ಕಾಲೇಜು ಆವರಣದ ಸ್ವಚ್ಛತೆ ಕಾಪಾಡುವಲ್ಲಿ ಈ ಹೊಸ ಪರಿಕಲ್ಪನೆ ಕಣ್ಮನ ಸೆಳೆಯುತ್ತಿದೆ. ನೋಡಲು ಇದು ಅಡಿಕೆ ಮರದ ಸೋಗೆಯ ಮನೆಯಾದರೂ ಇದು ಪರಿಸರ ಸ್ನೇಹಿ ಪ್ಲಾಸ್ಟಿಕ್ ಮನೆ. ಸುತ್ತಮುತ್ತಲಿರುವ ಕಸಗಳನ್ನು ಒಂದೆಡೆ ವಿಲೇವಾರಿ ಮಾಡುವ ವ್ಯವಸ್ಥೆಯನ್ನು ದಕ್ಷಿಣ ಕನ್ನಡದ ಪುತ್ತೂರಿನ ವಿವೇಕಾನಂದ ಕಾಲೇಜಿನ ರಾಷ್ಟ್ರೀಯ ಸೇವಾ ಸಂಘವು ಕಸದ ಬುಟ್ಟಿಯ ಜಾಗದಲ್ಲಿ ಸೋಗೆಮನೆಯನ್ನು ನಿರ್ಮಾಣ ಮಾಡಿದೆ. ಇದು ನೋಡಲು ಆಕರ್ಷಕವಾಗಿಯೂ ಜೊತೆಗೆ ಬಹೂಪಯೋಗಿಯಾಗಿಯೂ ಕಾರ್ಯನಿರ್ವಹಿಸುತ್ತಿರುವುದರಿಂದ ಇಲ್ಲಿನ ಕ್ಯಾಂಪಸ್ ಸದಾ ಸ್ವಚ್ಛವಾಗಿರುತ್ತದೆ. ಎಲ್ಲೇ ಕಸ ಕಂಡರೂ ಈ ಮನೆ ಜ್ಞಾಪಕಕ್ಕೆ ಬರುವಂತೆ ಸುಂದರವಾಗಿ ಇದನ್ನು ನಿರ್ಮಾಣ ಮಾಡಲಾಗಿದೆ. ಸೃಜನಾತ್ಮಕವಾಗಿ ರೂಪುಗೊಂಡಿರುವ ಈ ಮನೆ ಹೊಸತನದ ಯೋಚನೆಯೊಂದಿಗೆ ಸ್ವಚ್ಛತೆಗೆ ಮಾದರಿಯೆನಿಸಿದೆ.

–ದಿವ್ಯಶ್ರೀ ವಜ್ರದುಂಬಿ, ಪುತ್ತೂರು




### ನೀವೂ ಬರೆಯಿರಿ

'ಸುಧಾ' ವಾರಪತ್ರಿಕೆಯಲ್ಲಿ ಪ್ರಕಟವಾಗುವ 'ನಿಮ್ಮ ಪುಟ' ಓದುಗರ ಅಂಕಣಕ್ಕೆ ನಿಮ್ಮ ಸುತ್ತಮುತ್ತಲಿನ ವಿಶೇಷ ಸಂಗತಿಗಳ ಬಗ್ಗೆ ನೂರು ಪದಗಳ ಬರಹ ಮತ್ತು ಅದಕ್ಕೆ ಸಂಬಂಧಿಸಿದ ಚೆಂದದ ಫೋಟೊವನ್ನು ನಮಗೆ ಕಳುಹಿಸಿಕೊಡಿ.

ವಿಳಾಸ: editorsu@sudha.co.in

@SudhaWeekly